**ಅಸಲ ದಾವಾ ನಂ.363/2021.**

ಮೆ॥ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಗೋಕಾಕ ಇವರ ನ್ಯಾಯಾಲಯದಲ್ಲಿ ಗೋಕಾಕ

1] ಬಸಪ್ಪ ತಂದೆ ಲಕ್ಕಪ್ಪ ಕುಂಬಾರ

... ವಾದಿ

// ವಿರುದ್ಧ //

1] ಬೀರಪ್ಪ ತಂದೆ ರಾಯಪ್ಪ ಡೋಣಿ

..... ಪ್ರತಿವಾದಿ

S.B. GOROSHI
GOKAK TALUKA
DIST:BELAGAVI KARNATAKA
REG.No:13237/2017
EXPIRY DATE:
25-04-2027
NOTARY
GOVERNMENT OF INDIA

**ಪಿ.ಡಬ್ಲ್ಯೂ-2 ಇವರ ಮುಖ್ಯ ಸಾಕ್ಷಿ ವಿಚಾರಣಾ ಅಫಿಡವ್ಹಿಟ ಮೂಲಕ**

| | | |
|---|---|---|
| 1. | ಹೆಸರು | : ಮಲ್ಲಪ್ಪ ಸಣ್ಣಕ್ಕಿ |
| 2. | ತಂದೆಯ ಹೆಸರು | : ನಿಂಗಪ್ಪ ಸಣ್ಣಕ್ಕಿ |
| 3. | ವಯಾ | : 53 ವರ್ಷ |
| 4. | ಉದ್ಯೋಗ | : ಶೇತ್ಕಿ |
| 5. | ಸಾಕೀನ | : ಕೌಜಲಗಿ, ತಾ: ಗೋಕಾಕ |

ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಈ ಕೆಳಗಿನಂತೆ ಇರುತ್ತದೆ.

1] ನನಗೆ ವಾದಿ & ಪ್ರತಿವಾದಿ ಪರಿಚಯ ಇದ್ದು ಹಾಗೂ ದಾವೆದ ಆಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಕಾರಣ ನಾನು ಪ್ರತಿವಾದಿಯ ಪರವಾಗಿ ಈ ಸಾಕ್ಷಿ ಪ್ರಮಾಣ ಪತ್ರವನ್ನು ಮಾಡಲು ಅರ್ಹನಿರುತ್ತೇನೆ.

2] ಗೋಕಾಕ ತಾಲೂಕ ಪೈಕಿ ಕೌಜಲಗಿ ಗ್ರಾಮದ ದಾವೆದ ಜಮೀನು ರಿಸ.ನಂ.296*/2, ಕ್ಷೇತ್ರ 11ಎ-17ಗುಂಟೆ, ಪಿಕೆ 0-17ಗುಂಟೆ, ಉಳಿದ 11ಎ-00ಗುಂಟೆ, ಆಕಾರ ರೂ.3.34ಪೈ ಇದ್ದು ಇದರ ಪೈಕಿ 02ಎ-14ಗುಂಟೆ

ಜಮೀನು ಪ್ರತಿವಾದಿಯ ಮಾಲ್ಕಿ ವಹಿವಾಟಿಯ ಆಸ್ತಿ ಇರುತ್ತದೆ. ಪ್ರತಿವಾದಿಗೆ ಸನ್ 2015 ರಂದು ಮನೆತನದ ಅಡಚನೆ ಇದ್ದುದ್ದರಿಂದ ಪ್ರತಿವಾದಿಯು ವಾದಿಯ ಕಡೆಗೆ ಹೋಗಿ ರೂ.4,00,000/-ಗಳನ್ನು ಬಡ್ಡಿ ಮೇಲೆ ಕೊಡಲು ವಿನಂತಿಸಿಕೊಂಡಿದ್ದರಿಂದ ವಾದಿಯು ಸದರಿ ಹಣದ ಭದ್ರತೆಗಾಗಿ ಪ್ರತಿವಾದಿಯ ಜಮೀನು ಭದ್ರತೆ ಸಲುವಾಗಿ ಬರೆದುಕೊಡಬೇಕು ಅಂತಾ ಹೇಳಿದ್ದು ಇರುತ್ತದೆ. ಕಾರಣ ಪ್ರತಿವಾದಿಯು ವಾದಿಗೆ ಹಣದ ಭದ್ರತೆಗಾಗಿ ಜಮೀನು ಬರೆದುಕೊಟ್ಟಿರುತ್ತಾನೆ. ಸದರಿ ಹಣವನ್ನು ಪ್ರತಿವಾದಿಯು ವಾದಿಗೆ ಮೂರು ವರ್ಷದ ನಂತರ ಮರಳಿ ಕೊಡುತ್ತೇನೆ ಅಂತಾ ಹೇಳಿದ್ದು ಇರುತ್ತದೆ.

3] ನಂತರ ಪ್ರತಿವಾದಿಯು ದಿ:16/02/2018 ರಂದು ನನ್ನನ್ನು ಹಾಗೂ ಶ್ರೀ. ಹಣಮಂತ ಮಲ್ಲಪ್ಪ ಡೋಣಿ, ಇವರನ್ನು ಕರೆದುಕೊಂಡು ಹೋಗಿ ವಾದಿಗೆ ನಮ್ಮ ಸಮಕ್ಷಮ ಸದರಿ ಹಣವನ್ನು ಮರಳಿ ಕೊಟ್ಟು ಭದ್ರತಾ ಪತ್ರವನ್ನು ರದ್ದು ಮಾಡಲು ವಿನಂತಿಸಿಕೊಂಡಿದ್ದು ಇರುತ್ತದೆ. ಆಗ ವಾದಿಯು ಹಣ ಮುಟ್ಟಿದ ಬಗ್ಗೆ ನನ್ನ ಹಾಗೂ ಹಣಮಂತ ಇವರ ಸಮಕ್ಷಮ ಒಪ್ಪಿಕೊಂಡಿದ್ದು ಇರುತ್ತದೆ. ನಂತರ ವಾದಿಯು ಸದರಿ ಕಾಗದವನ್ನು ರದ್ದುಪಡಿಸಲು ಬಾಂಡ ರೈಟರ ಕಡೆಗೆ ಹೋಗಿ ಈ ಮೊದಲಿನ ಕಾಗದವನ್ನು ರದ್ದುಪಡಿಸುವ ಬದಲಾಗಿ ವಾದಿಯು ತಮ್ಮ ಸಾಕ್ಷಿದಾರರ ಹಾಗೂ ಬಾಂಡ ರೈಟರ್ ಜೊತೆಗೆ ಮಿಲಾಪಿಯಾಗಿ ಪ್ರತಿವಾದಿಗೆ ಗೋತ್ತಾಗದಂತೆ ಇನ್ನೊಂದು ಖೊಟ್ಟಿ ಬಿನ್ ಕಬ್ಜಾ ಖರೀದಿ ಕರಾರ ಪತ್ರ ಅಂಬುವ ಕಾಗದವನ್ನು ದಿ:16/02/2018 ರಂದು ಗೋಕಾಕದ ಉಪ ನೊಂದಣಿ ಕಛೇರಿಯಲ್ಲಿ ತಯಾರಿಸಿಕೊಂಡಿದ್ದು ಇರುತ್ತದೆ. ಸದರಿ ಕಾಗದದಲ್ಲಿ ಬರೆದ ವಿಷಯಗಳು ಪ್ರತಿವಾದಿಗೆ ಹಾಗೂ ನನಗೆ ಹಾಗೂ ಹಣಮಂತ ಇವರಿಗೆ ಓದಿ ಹೇಳಿರುವುದಿಲ್ಲ. ಪ್ರತಿವಾದಿಯು ನನ್ನ ಹಾಗೂ ಹಣಮಂತ ಇವರ ಸಮಕ್ಷಮ ವಾದಿಯ ಕಡೆಯಿಂದ ಪಡೆದುಕೊಂಡ ಸಂಪೂರ್ಣ ಹಣವನ್ನು ವಾದಿಗೆ

NOTARY
S.B. GOROSHI
GOKAK TALUKA
DIST:BELAGAVI KARNATAKA
REG.No:13237/2017
EXPIRY DATE:
25-04-2027
GOVERNMENT OF INDIA

ಮರಳಿ ಕೊಟ್ಟಿದ್ದರೂ ಕೂಡಾ ವಾದಿಯು ಪ್ರತಿವಾದಿಯ ಆಸ್ತಿಯನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ಖೊಟ್ಟಿ ಕಾಗದವನ್ನು ತಯಾರಿಸಿ, ಸದರಿ ಕಾಗದದ ಆಧಾರದ ಮೇಲಿಂದ ಈ ಸುಳ್ಳು ಸ್ವರೂಪದ ದಾವೆಯನ್ನು ಮಾಡಿರುತ್ತಾನೆ,

ಸದರಿ ಪ್ರತಿವಾದಿಯು ವಾದಿಯ ಹಣ ಮರಳಿ ಕೊಡುವ ಸಮಯದಲ್ಲಿ ನಾನು ಹಾಗೂ ಹಣಮಂತ ಇವರು ಹಾಜರ ಇದ್ದು ಕಾರಣ ಈ ಹಣಕಾಸಿನ ವ್ಯವಹಾರದ ಬಗ್ಗೆ ನನಗೆ ಗೋತ್ತಿರುತ್ತದೆ ಅಂತಾ ಮಾಡಿದ ಸಾಕ್ಷಿ ಪ್ರಮಾಣ ಪತ್ರ.

ಈ ಮೇಲೆ ಪ್ರತಿಜ್ಞಾ ಪ್ರಮಾಣ ಪತ್ರದಲ್ಲಿ ಹೇಳಿದ ಎಲ್ಲಾ ಸಂಗತಿಗಳು ನನ್ನ ತಿಳುವಳಿಕೆ ಮಾಹಿತಿ ವ ನಂಬಿಕೆ ಪ್ರಕಾರ ನಿಜವಿರುತ್ತವೆ.

ಸ್ಥಳ: ಗೋಕಾಕ
ದಿನಾಂಕ: 06-07-2026

ಶಪಥವಿಧಿಗಾರ

"ಸದರಿಯವರ ಪರಿಚಯವಿದೆ"

[ಸಿ. ವ್ಹಿ. ಚಂದರಗಿ]
ವಕೀಲರು-ಗೋಕಾಕ

NOTARY * GOVERNMENT OF INDIA
S.B. GOROSHI
GOKAK TALUKA
DIST:BELAGAVI KARNATAKA
REG.No:13237/2017
EXPIRY DATE:
25-04-2027

NO OF CORRECTION Nil

SWORN TO BEFORE ME
- 6 JUL 2026
S. B. GOROSHI B.A.,LL.B.(Spl.)
ADVOCATE & NOTARY,
GOKAK TALUKA